


ಚಂದ್ರನಲ್ಲಿಗೆ ಇಸ್ರೋ ಗುಂಡನನ್ನು ಕಳುಹಿಸಿತು. ಆದರೆ ಗುಂಡ ಅರ್ಧ ದಾರಿಯಿಂದಲೇ ಮರಳಿ ಬಂದ. ಅವನು ಹಿಂದಿರುಗುತ್ತಿದ್ದಂತೆ ಮಾಧ್ಯಮದವರು ಅವನನ್ನು ಸುತ್ತುವರಿದು ಹೀಗೆ ಕೇಳಿದರು.

ಮಾಧ್ಯಮದವರು: ನೀನು ಅರ್ಧ ದಾರಿಯಿಂದಲೇ ಏಕೆ ಮರಳಿ ಬಂದೆ?

ಗುಂಡ: ಇವತ್ತು ಅಮಾವಾಸ್ಯೆ, ಚಂದ್ರನಿರುವುದಿಲ್ಲ ಅನ್ನೋದು ಅರ್ಧ ದಾರಿಗೆ ಹೋದಾಗ ನೆನಪಾಯಿತು. ಹೀಗಾಗಿ, ಮರಳಿದೆ.

---

ಪತಿ: ಒಂದು ವೇಳೆ ನಾನು ಸತ್ತು ಹೋದರೆ ನೀನೇನು ಮಾಡುತ್ತೀಯಾ?

ಪತ್ನಿ: ಬಹುಶಃ ನಾನು ಸತ್ತು ಹೋಗಬಹುದು.

ಪತಿ: ನೀನು ಯಾಕೆ ಸಾಯುತ್ತೀಯಾ?

ಪತ್ನಿ: ಕೆಲವೊಮ್ಮೆ ಅತಿ ಸಂತೋಷವಾದರೆ, ಅದನ್ನು ತಡೆದುಕೊಳ್ಳಲಾಗದೆ ಹಾಗಾಗಬಹುದು.

---

ಪತ್ನಿ: ನಾನು ನಿಮಗೆ ಟೋಸ್ಟ್ ಮೇಲೆ ಜೇನು ತುಪ್ಪ ಸವರಿ ಕೊಡಲೇ?

ಪತಿ: ಬೇಡ ನಿನಗೆ ಗೊತ್ತಿಲ್ಲ. ಜೇನು ತುಪ್ಪ ಜೇನು ನೊಣದ ಬಾಯಿಯಿಂದ ಸಂಗ್ರಹವಾಗುತ್ತದೆ. ನಾನು ಯಾರದ್ದೋ ಬಾಯಿಯಿಂದ ಉತ್ಪತ್ತಿಯಾದ ವಸ್ತುವನ್ನು ತಿನ್ನುವುದಿಲ್ಲ.

ಪತ್ನಿ: ಹಾಗಾದರೆ ನಿಮಗೆ ಮೊಟ್ಟೆಯೊಂದನ್ನು ಬೇಯಿಸಿ ಕೊಡಲೇ?

---

ಗಂಡ ಹೆಂಡತಿಯ ಮೆಸೇಜ್ ಸಂಭಾಷಣೆ ಹೀಗಿತ್ತು.

ಹೆಂಡತಿ: ನೆರಮನೆಯ ಮಹಿಳೆ ನಿಮಗೆ ಹೇಗೆ ಕಾಣುತ್ತಾಳೆ?

ಗುಂಡ: ಥೇಟ್ ಮಂಗನ ಹಾಗೇ ಕಾಣುತ್ತಾಳೆ.

ಹೆಂಡತಿ: ಮನೆಗೆ ಬರುವಾಗ ನನಗಾಗಿ ಎರಡು ಒಳ್ಳೆಯ ಸೀರೆ ತೆಗೆದುಕೊಂಡು ಬನ್ನಿ. ಇಲ್ಲದಿದ್ದರೆ ನೀವು ಮಾಡಿದ ಮೆಸೇಜ್ ಅನ್ನು ಅವಳಿಗೆ ಫಾರ್ವರ್ಡ್ ಮಾಡುತ್ತೇನೆ.

---

ಚಿಂಟು: ನಾನು ಕೆರೆಗೆ ಈಜಲು ಹೋಗುತ್ತೇನೆ.

ತಾಯಿ: ಬೇಡ ಮಗು ನೀನು ಕೆರೆಯಲ್ಲಿ ಮುಳುಗಿದರೆ ಏನು ಗತಿ?

ಚಿಂಟು: ಆದರೆ ಡ್ಯಾಡಿ ಆರಾಮಾಗಿ ಈಜುತ್ತಿದ್ದಾರಲ್ಲ.

ತಾಯಿ: ಅವರದ್ದು ಟರ್ಮ್ ಇನ್ಶ್ಯುರೆನ್ಸ್ ಇದೆ.

---

ತಾಯಿ: ಇಷ್ಟು ತಡಮಾಡಿ ಎಲ್ಲಿಂದ ಬರುತ್ತಿರುವೆ, ಎಲ್ಲಿಗೆ ಹೋಗಿದ್ದೆ?

ಗೋಪಿ: ಗೆಳೆಯರೊಂದಿಗೆ ಕ್ಲಬ್ಬಿನಲ್ಲಿ ಡಾನ್ಸ್ ಮಾಡಲು ಹೋಗಿದ್ದೆ.

ತಾಯಿ: ಅಯ್ಯೋ ಕ್ಲಬ್ಬಿಗೇಕೆ ಹೋಗಿದ್ಯೊ.. ಅಲ್ಲಿ ನೋಡಬಾರದ್ದು ಏನಾದರೂ ನೋಡಿದ್ಯಾ?

ಗೋಪಿ: ಅಂಥದ್ದೇನೂ ನೋಡಿಲ್ಲ. ಆದರೆ, ಅಪ್ಪ ತನ್ನ ಸೆಕ್ರೆಟರಿಯೊಂದಿಗೆ ಡಾನ್ಸ್ ಮಾಡುವುದನ್ನು ನೋಡಿದೆ.







ಬಾವ: ನಾನು ಮೂರ್ಖ. ಆದ್ದರಿಂದಲೇ ನಿನ್ನ ಅಕ್ಕನನ್ನು ಮದುವೆಯಾದೆ.

ನಾದಿನಿ: ನೀವು ಮೂರ್ಖರಷ್ಟೇ ಅಲ್ಲ, ಕುರುಡರೂ. ಅಕ್ಕನ ಪಕ್ಕದಲ್ಲೇ ನಿಂತಿದ್ದ ನಾನು ನಿಮಗೆ ಕಾಣಿಸಲಿಲ್ಲ. ಅಕ್ಕನ ಬದಲಿಗೆ ನನಗೆ ಮಾಲೆ ಹಾಕಬಹುದಾಗಿತ್ತಲ್ಲವೇ.

---

ಹೆಂಡತಿ: ನಾನು ಇಂಗ್ಲಿಷ್ ಕಲಿಯಲು ಆನ್‌ಲೈನ್ ಕ್ಲಾಸಿಗೆ ಸೇರಿಕೊಂಡಿದ್ದೇನೆ.

ಗಂಡ: ತುಂಬಾ ಒಳ್ಳೆಯದು. ಸರಿ ಈಗ ಊಟ ಬಡಿಸು.

ಹೆಂಡತಿ: ಸರಿ ಬಡಿಸ್ತೀನಿ. ನೀವು ನಿಧಾನವಾಗಿ ಡಿನ್ನರ್ ಮಾಡಿ.

ಗಂಡ: ಮುಂಡಾ ಮೋಚ್ತು ನಿನ್ನ ಇಂಗ್ಲಿಷ್ ಕಲಿಕೆ. ಮಧ್ಯಾಹ್ನದ ಊಟಕ್ಕೆ ಯಾರಾದ್ರೂ ಡಿನ್ನರ್ ಅನ್ನುತ್ತಾರಾ? ಲಂಚ್ ಎನ್ನುತ್ತಾರೆ.

ಹೆಂಡತಿ: ನಾನು ಹೇಳಿದ್ದು ಸರಿಯಾಗಿಯೇ ಇದೆ. ನಾನು ರಾತ್ರಿ ಊಟವನ್ನೆ ಈಗ ಬಿಸಿ ಮಾಡಿ ತಂದಿದ್ದೇನೆ. ತಿನ್ನಿ.

---

ರೋಗಿ: ನೀನು ನನ್ನ ಹೃದಯ ಕದ್ದಿರುವೆ.

ನರ್ಸ್: (ನಾಚುತ್ತ) ಸುಳ್ಳು, ನಾನು ನಿನ್ನ ಹೃದಯಕ್ಕೆ ಕೈಯನ್ನೇ ಹಚ್ಚಿಲ್ಲ. ನಾನು ಕದ್ದಿರುವುದು ನಿನ್ನ ಕಿಡ್ನಿಯನ್ನು.

ರೋಗಿ: ಹಾಗೆಯೇ ಹೃದಯವನ್ನೂ ಕದ್ದುಬಿಡು ಪ್ಲೀಸ್!

ಸಂಗ್ರಹ: ಮುರಲೀಧರ ಕುಲಕರ್ಣಿ, ಬೀದರ್